ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂ: 4 ಪಿ ಡಬ್ಲ್ಯೂ ಃ 4**

ಸಾಕ್ಷಿಯ ಹೆಸರು ಃ ಗೀತಾ ಹುಲ್ ಬಜಾರ್

ಗಂಡನ ಹೆಸರು ಃ ಪ್ರಕಾಶ.

ವಯಸ್ಸು ಃ 45 ವರ್ಷ

ಉದ್ಯೋಗ ಃ ಗೃಹಿಣಿ.

ವಾಸಸ್ಥಳ ಃ ಲಕ್ಷ್ಮೇಶ್ವರ, ತಾಃ ಲಕ್ಷ್ಮೇಶ್ವರ.

ದಿನಾಂಕಃ 15/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಚಾಸಾ 1 ನನ್ನ ಮೈದುನ. ಚಾಸಾ 5 ನನ್ನ ನಾದಿನಿ ಗಂಡ. ಚಾಸಾ 6 ರ ಪರಿಚಯವಿದೆ. ಮೃತ ಪ್ರಕಾಶ ಗಣಪತಿ ನನ್ನ ಗಂಡ. 1 ನೇ ಆರೋಪಿ ನೋಡಿದ್ದೀರಾ ಎಂದರೆ ಇಲ್ಲ. ದಿಃ 25-06-2025 ರಂದು ನನ್ನ ಗಂಡ ಬೆಳಿಗ್ಗೆ 09-00 ಗಂಟೆಗೆ ಮನೆ ಬಿಟ್ಟು ಛಬ್ಬಿ ಗಣಪತಿ ದೇವಸ್ಥಾನಕ್ಕೆ ಪಲ್ಸರ್ ಬೈಕ ನಂಬರ ಕೆಎ-26-ಇ-7184 ನ್ನು ತೆಗೆದುಕೊಂಡು ಅಲ್ಲಿಗೆ ಹೋಗಿದ್ದರು. ನಂತರ ಕುಂದಗೋಳದ ಅಕ್ಷಯ ಗ್ಯಾಸ್ ಗೋಡೌನ್ ಬಳಿ ಹೋಗುತ್ತಿದ್ದಾಗ ಕುಂದಗೋಳದಿಂದ ಗ್ಯಾಸ್ ಗೋಡೌನ್ ಗೆ ಹೋಗುತ್ತಿದ್ದ ಬುಲೋರೋ ವಾಹನ ಕೆಎ-25-ಡಿ-7212 ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಗೋಡೌನ್ ಗೆ ಬಲ ತಿರುವು ತೆಗೆದುಕೊಳ್ಳುವಾಗ ನನ್ನ ಗಂಡನ ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದು, ಬೈಕ್ ಕೆಳಗೆ ಬಿದ್ದಾಗ ನನ್ನ ಗಂಡನ ತಲೆಗೆ ಭಾರಿ ಪೆಟ್ಟು ಬಿದ್ದಿದ್ದು ನನಗೆ ಚಾಸಾ 1 ನನಗೆ ಕರೆ ಮಾಡಿ ಅಪಘಾತದ ವಿಚಾರ ತಿಳಿಸಿದ್ದು, ನಾನು, ಚಾಸಾ 1 ಮತ್ತು ಚಾಸಾ 5 ಅವರು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋಗಿದ್ದೇವು. ನಾವು ಕಿಮ್ಸ ಆಸ್ಪತ್ರೆಗೆ ಹೋಗುವಷ್ಟರಲ್ಲಿ ನನ್ನ ಗಂಡ ಮೃತ ಪಟ್ಟಿದ್ದ, ಅಲ್ಲಿದ್ದವನ್ನು ಕೇಳಿದಾಗ ಕುಂದಗೋಳ ಸರಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಕರೆ ತಂದಾಗ ಮೃತ ಪಟ್ಟಿದ್ದಾಗಿ ಹೇಳಿದ್ದರು. ಅಪಘಾತವಾದಾಗ ಮಃ 01-45 ಆಗಿತ್ತು. ಅದೇ ದಿನ ಕುಂದಗೋಳ ಪೋಲೀಸ್ ಠಾಣೆಗೆ ಚಾಸಾ 1 ಬಂದು ಸಂಜೆ 06-00 ಗಂಟೆಗೆ ದೂರನ್ನು ಕೊಟ್ಟಿರುತ್ತಾರೆ. ಆ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ಆರೋಪಿ ಬುಲೋರೋವನ್ನು ಕುಂದಗೋಳ ಕಡೆಯಿಂದ ಇಂಡೇನ್ ಗ್ಯಾಸ್ ಗೋಡೌನ್ ಕಡೆಗೆ ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಮೋಟಾರ್ ಸೈಕಲಗೆ ಡಿಕ್ಕಿ ಪಡಿಸಿದ್ದಾನೆ ಎಂದರೆ ಸರಿ. ಚಾಲಕನ ಹೆಸರು ಕೇಳಲಾಗಿ ರಾಜಶೇಖರ ಸಿದ್ಧನಣ್ಣವರ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಸಿ ಎಸ್ ಪಿ ವಕೀಲರಿಂದ ಃ

3. ಮೃತ ಪ್ರಕಾಶ ನನ್ನ ಗಂಡ. ನಾನು ಗದಗ ನ್ಯಾಯಾಲಯದಲ್ಲಿ ನನ್ನ ಗಂಡನ ಮರಣಕ್ಕೆ ಸಂಬಂಧಪಟ್ಟಂತೆ ಪರಿಹಾರ ಕೋರಿ ಅರ್ಜಿ ಹಾಕಿದ್ದೇನೆ ಎಂದರೆ ಸರಿ. ಸದರಿ ಕೇಸಗೆ ಅನುಕೂಲವಾಗಲಿ ಎಂದು ಆರೋಪಿಯ ವಿರುದ್ಧ ಚಾಸಾ 1 ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಹೇಗಾಯಿತು ಎಂದು ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮಾಹಿತಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಬುಲೋರೋ ವಾಹನ ಚಾಲಕನ ನಿರ್ಲಕ್ಷತನದಿಂದ ಆಗಿದೆ. ವಾಹನ ಸಂಖ್ಯೆ ಗೊತ್ತಿಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.